ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂದಿ/39
Ref. No. KSFC/H.O./

ದಿನಾಂಕ : 26/4/2016
Date

## ಸುತ್ತೋಲೆ

ವಿಷಯ: ಒಳರೋಗಿ ಚಿಕಿತ್ಸೆಯ ವಾರ್ಡ್ ದರದ
ಪರಿಷ್ಕರಣೆ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಉದ್ಯೋಗಿಗಳಿಗೆ ಒಳರೋಗಿ ಚಿಕಿತ್ಸೆ ಸಂಬಂಧಪಟ್ಟ ವೈದ್ಯಕೀಯ ವೆಚ್ಚಗಳನ್ನು ಪ್ರಸ್ತುತ ಸೆಂಟ್ ಜಾನ್ಸ್ ಆಸ್ಪತ್ರೆಯ ದರದಲ್ಲಿ ಮರುಪಾವತಿಸುತ್ತಿದ್ದು, ವಾರ್ಡ್ ದರಗಳನ್ನು ಕರ್ನಾಟಕ ಸರ್ಕಾರದಲ್ಲಿ ಪ್ರಚಲಿತದಲ್ಲಿರುವಂತೆ ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರಸಂ | ಉದ್ಯೋಗಿಗಳ ಮೂಲ ವೇತನದ ಹಂತ | ವಾರ್ಡ್‌ಗಳ ವರ್ಗ/ ಯಾವ ವರ್ಗದ ವಾರ್ಡ್‌ಗೆ ಅರ್ಹತೆ ಇರುವುದು | ಅರ್ಹತೆ ಇರುವ ವಾರ್ಡ್‌ನ ಗರಿಷ್ಠ ದರ/ ರೂಂ ಬಾಡಿಗೆ |
|---|---|---|---|
| 1 | ಮೂಲ ವೇತನ ರೂ.16000/- ವರೆಗೆ | ಸಾಮಾನ್ಯ ವಾರ್ಡ್ | ದಿನ ಒಂದಕ್ಕೆ ರೂ.500/- |
| 2 | ಮೂಲ ವೇತನ ರೂ.16000/- ರಿಂದ ರೂ.43200/- ವರೆಗೆ | ಅರೆ ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ.1500/- |
| 3 | ಮೂಲ ವೇತನ ರೂ.43200/- ಕ್ಕಿಂತ ಮೇಲ್ಪಟ್ಟು | ಖಾಸಗಿ ವಾರ್ಡ್ | ದಿನ ಒಂದಕ್ಕೆ ರೂ.2000/- |

ಮೇಲ್ಕಂಡ ಪರಿಷ್ಕರಣೆ ದಿನಾಂಕ 01.05.2016 ರಿಂದ ಜಾರಿಗೆ ಬರುತ್ತದೆ. ಒಂದು ವೇಳೆ ಉದ್ಯೋಗಿಗಳು ನಿಗದಿಪಡಿಸಿರುವ ದರ / ರೂಂ. ಬಾಡಿಗೆಗಿಂತ ಕಡಿಮೆ ವೆಚ್ಚದ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಕಡಿಮೆ ವೆಚ್ಚದ ದರಗಳಲ್ಲೇ ವೈದ್ಯಕೀಯ ವೆಚ್ಚಗಳನ್ನು ಮರುಪಾವತಿಸಲಾಗುವುದು. ಇದಲ್ಲದೇ ಉದ್ಯೋಗಿಗಳು ವೈದ್ಯಕೀಯ ಮರುಪಾವತಿ ಅರ್ಜಿಗಳಲ್ಲಿ ಅವರ ಮೂಲ ವೇತನವನ್ನು ತಪ್ಪದೇ ನಮೂದಿಸತಕ್ಕದ್ದು. ಒಳರೋಗಿ ಚಿಕಿತ್ಸೆ ಮರುಪಾವತಿಗೆ ಸಂಬಂಧಪಟ್ಟಂತೆ ಈಗ ಇರುವ ಇತರೆ ನಿಯಮ/ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಈ ಸುತ್ತೋಲೆಯನ್ನು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪೂರ್ವಾನುಮತಿ ಪಡೆದು ಹೊರಡಿಸಲಾಗಿದೆ.

26/4/16

ಕಾರ್ಯ ನಿರ್ವಾಹಕ ನಿರ್ದೇಶಕರು-1

ಗೆ,

ಎಲ್ಲಾ ಶಾಖಾ / ಆಲೆಪ ಕೋಶಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿದೇಶಕರು – 2
ಮಾನ್ಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಕಛೇರಿ
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ.

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್: 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bangalore-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in